1106 ಶ್ರೀ ನಂದೀಶ ರೆಡ್ಡಿ ಎನ್.ಎಸ್. (ಕೆ.ಆರ್.ಪುರಂ) : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ. ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಲು ಸರ್ಕಾರ ಕೈಗೊಂಡ ಪ್ರಮವೇನು?

ಇ) ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರು ಸಂಗ್ರಹ ಮಾಡಲು ಜಿ.ಎಲ್.ಆರ್.ಗಳನ್ನು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ. ಸಂಪೂರ್ಣ ವಿವರ ನೀಡುವುದು;

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಹೌದು.

ಆ) ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ನಗರಕ್ಕೆ ಸರಾಸರಿ ಪ್ರತಿ ದಿನ 80 ದಶ ಲಕ್ಷ ಲೀಟರ್ ನೀರನ್ನು ಹೆಚ್ಚುವರಿಯಾಗಿ ಪಂಪ್ ಮಾಡಿ ಸರಬರಾಜು ಮಾಡಲಾಗುತ್ತಿದೆ.

ನಗರದ ದಕ್ಷಿಣ ಭಾಗದಿಂದ ಪೂರ್ವ ಭಾಗಕ್ಕೆ ಹೈಗ್ರೌಂಡ್ಸ್ ಮೂಲಕ ಹೆಚ್ಚುವರಿಯಾಗಿ ದಿನಂಪ್ರತಿ 10 ದಶ ಲಕ್ಷ ಲೀಟರ್ ರವಾನಿಸಲಾಗುತ್ತಿದೆ.

ತ್ವರಿತ ಪರಿಹಾರವಾಗಿ ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದಲ್ಲಿ 190 ಕೊಳವೆ ಬಾವಿಗಳನ್ನು ಕೊರೆದು ಇವುಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಇ) ಕಾವೇರಿ 4ನೇ ಹಂತ 2ನೇ ಘಟ್ಟದ ಯೋಜನೆಯಡಿ ನಗರದ ಪೂರ್ವ ಭಾಗಕ್ಕೆ 235 ದಶ ಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲು ಯೋಜನೆ ರೂಪಿಸಿದ್ದು, ಇದರಲ್ಲಿ ಕೆ.ಆರ್.ಪುರಂ ಪ್ರದೇಶಕ್ಕೆ 60 ದಶ ಲಕ್ಷ ಲೀಟರ್ ನೀರನ್ನು ವರ್ಗಾಯಿಸಲು ಉದ್ದೇಶಿಸಿದೆ.

ಈ ಯೋಜನೆಯಡಿ ಬಿ. ನಾರಾಯಣಪುರ ಸರ್ವೇ ನಂ–142 ರಲ್ಲಿ, 4 ದಶ ಲಕ್ಷ ಲೀಟರ್ ನೀರು ಶೇಖರಣಾ ಸಾಮರ್ಥ್ಯದ ಸಂಪ್ ಟ್ಯಾಂಕ್ ಮತ್ತು ಜಲರೇಚಕ ಯಂತ್ರಗಳನ್ನು ಅಳವಡಿಸಿ ಅಲ್ಲಿಂದ ಓ.ಎಂ.ಬಿ.ಆರ್., ಹೆಚ್, ಬಿ.ಆರ್. ಬಡಾವಣೆಗಳಲ್ಲಿರುವ ಜಲಾಶಯಗಳಲ್ಲಿ ನೀರು ಶೇಖರಿಸಿ

ನಾಗರೀಕರಿಗೆ ಸರಬರಾಜು ಮಾಡಲಾಗುವುದು. ಇದರ ಜೊತೆಗೆ ಇದೇ ಸ್ಥಳ ದಲ್ಲಿ 9 ದಶ ಲಕ್ಷ ಲೀಟರ್ ನೀರಿನ ಸಾಮರ್ಥ್ಯದ ಜಲಾಶಯವನ್ನು ನಿರ್ಮಿಸಿ ಆ ಪ್ರದೇಶದ ಸುತ್ತಮುತ್ತಲಿನ ನಾಗರೀಕರಿಗೆ ನೀರು ಸರಬರಾಜು ಮಾಡಲು ಉದ್ದೇಶಿಸಿದೆ.

920 ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಚಲನಚಿತ್ರದ ಸಿ.ಡಿ. ಮತ್ತು ವಿಡಿಯೋಗಳ ಪೈರೆಸಿಯಾಗು ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಚಲನ ಚಿತ್ರದ ಸಿಡಿ ಮತ್ತು ವಿಡಿಯೋಗಳ ಪೈರೆಸಿ ತಡೆಗಟ್ಟಲು ಗೂಂಡಾ ಕಾಯಿದೆಯನ್ನು ಜಾರಿಗೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸಿದೆಯೇ?

ಶ್ರೀ ಡಾ.ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಹೌದು.

English version

Yes.

ಆ) ರಾಜ್ಯದಲ್ಲಿ ಚಲನ ಚಿತ್ರದ ಸಿಡಿ ಮತ್ತು ವಿಡಿಯೋಗಳ ಪೈರೆಸಿ ಸಿಡಿಗಳ ಮಾರಾಟವನ್ನು ತಡೆಗಟ್ಟಲು ಸರ್ಕಾರ ಗೂಂಡಾ ಕಾಯಿದೆಗೆ ತಿದ್ದುಪಡಿ ತರಲು ಪರಿಗಣಿಸುತ್ತಿದೆ.

English version

Government is considering amendment to Goonda Act to prevent piracy of CD and Video of films in the State.

963 ಶ್ರೀ ವೀರಭದ್ರಪ್ಪ ಹಾಲಹರವಿ, (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಾಲಿಕೆಯ ಆಸ್ಪತ್ರೆಗಳನ್ನು ಸರ್ಕಾರಕ್ಕೆ ಒಳಪಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪಾಲಿಕೆಯ ಆಸ್ಪತ್ರೆಗಳನ್ನು ಸರ್ಕಾರ ದತ್ತು ಪಡೆದು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ; ಪಾಲಿಕೆಯ ವ್ಯಾಪ್ತಿಯಲ್ಲಿ